AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಹೆಚ್. ನಾಗವೇಣಿಯವರ ಕಸಬರಿಕೆ ಕತೆಯಲ್ಲಿ: ಪ್ರೀತಿ ಮತ್ತು ಜಾತಿ ರಾಜಕಾರಣ

**ಮಧು ಟಿ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ ಶಂಕರಘಟ್ಟ,
ಶಿವಮೊಗ್ಗ.
madhutba4@gmail.com

ಜಾತಿ ಎಂಬ ಪದವನ್ನು ಇಂಗ್ಲೀಷ್‌ನ caste ಪದಕ್ಕೆ ಸಂವಾದಿಯಾಗಿ ಬಳಸಲಾಗಿದೆ. Caste ಎಂಬುದು ಸ್ಪ್ಯಾನಿಷ್ ಭಾಷೆಯಿಂದ ಬಂದಿದೆ. ಕ್ಯಾಸ್ಟ್‌ಎಂದರೆ ತಳಿ, ಅನುವಂಶೀಯತೆ, ಜನಾಂಗ, ಕುಲ ಎಂಬ ಅರ್ಥವನ್ನು ನೀಡುತ್ತದೆ. ಕ್ಯಾಸ್ಟ್ ಎಂಬುದನ್ನು ಮೊಟ್ಟಮೊದಲ ಭಾರಿಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಾದ ಜಾತಿಗೆ ಅನ್ವಯಿಸಿದವರು ಪೋರ್ಚುಗೀಸರು. ಕ್ಯಾಸ್ಟ್ ಪದವನ್ನು 1563 ರಲ್ಲಿ ಗಾರ್ಸಿಯಾ ಡಿ ಓರ್ಟಾ ಎಂಬುವನ್ನು ಮೊದಲಿಗೆ ಬಳಸಿದನು.

ಜಾತಿಯು ಭಾರತದ ಸಮಾಜದಲ್ಲಿ ಸ್ತರವ್ಯವಸ್ಥೆಯನ್ನು ರೂಪಿಸಿದೆ. ಇದರ ಹಿನ್ನೆಲೆಯಲ್ಲಿ ಭಾರತದಲ್ಲಿ ಮನುಷ್ಯರನ್ನು ಜಾತಿಯ ಆಧಾರದ ಮೇಲೆ ಗುರುತಿಸುವ ವ್ಯವಸ್ಥೆ ಇಂದಿಗೂ ಮುಂದುವರೆದಿದೆ. ಇಂತಹ ಜಾತಿವ್ಯವಸ್ಥೆಯ ಹಿನ್ನೆಲೆಯಲ್ಲಿ ಭಾರತದ ಸಮಾಜ ರಚನೆಗೊಂಡಿದೆ ಎಂಬುದು ವಿಪರ್ಯಾಸ. ಜಾತಿ ವ್ಯವಸ್ಥೆಯಲ್ಲಿ ಮನುಷ್ಯ ಮನುಷ್ಯನನ್ನೆ ಕ್ರೂರವಾಗಿ ನಡೆಸಿಕೊಳ್ಳುವ ಘಟನೆಗಳು ದಿನ ಪ್ರತಿಕೆಯಲ್ಲಿ ವರದಿಯಾದರು ಸಂಬಂಧವೆ ಇಲ್ಲದಂತೆ ಮೂಕವಾಗಿರುವುದು ಒಂದು ಕಡೆ, ಆದರೆ ಮತ್ತೊಂದು ಕಡೆ ನಾಗರಿಕ ಸಮಾಜ ಎಂದು ಕರೆದುಕೊಳ್ಳುವ ಮನುಷ್ಯನ ಈ ವೈರುಧ್ಯತೆಯ ನೆಲೆಯನ್ನು ಕಂಡಾಗ ಅವನ ಅಂತರಾಳದಲ್ಲೆ ಸೂಪ್ತವಾಗಿ ಅವನ ಅರಿವಿಲ್ಲದೆ ಅವನ ನಡೆ–ನುಡಿಯಲ್ಲಿ ಜಾತಿಯನ್ನು ಪ್ರತಿನಿಧಿಸುವ ಮತ್ತು ಅದನ್ನೆ ಹುಡುಕುವ ಪ್ರಯತ್ನಗಳು ನಡೆಯುತ್ತಿರುತ್ತದೆ, ಎಂಬುದು ಸತ್ಯ. ಅದನ್ನು ವಿರುದ್ಧಿಸುವ ಪ್ರಯತ್ನವು ನಡೆಯುವ ಹೊತ್ತಿಗೂ ಅದನ್ನು ಮೀರಲಾಗದ ಅಸಹಾಯಕತೆಯನ್ನು ಕಾಣತ್ತೇವೆ. ಇಂತಹ ಜಾತಿ ವ್ಯವಸ್ಥೆಯ ಸಮಾಜದ ಒಳಗೆ ನಡೆಯುವ ಕ್ರೌರ್ಯ, ಶೋಷಣೆ, ದೌರ್ಜನ್ಯವನ್ನು ಕನ್ನಡ ಸಾಹಿತ್ಯದಲ್ಲಿ ಕವಿಗಳು/ಲೇಖಕರು ಕಾಲ ಕಾಲಕ್ಕೆ ಜಾತಿಯ ವಿಷಯವಾಗಿ ದಾಖಲಿಸುತ್ತ ವಿರೋಧಿಸುತ್ತಾ ಬಂದಿರುವುದನ್ನು ಆದಿ ಕವಿ ಪಂಪನಿಂದ ಹಿಡಿದು ಸಮಕಾಲೀನ ಬರಹಗಾರರ ಬರಹಗಳಲ್ಲೂ ಕಾಣಬಹುದು.

ಕಸಬರಿಕೆ ಕಥೆಯಲ್ಲಿ ಮುಖ್ಯವಾಗಿ ಜಾತಿ ರಾಜಕಾರಣ ಎದ್ದು ಕಾಣುವ ಅಂಶ. ಜಾತಿಯಿಂದ ಚಂದುವನ್ನು ನಿಂದಿಸುವ ಅಮ್ಮಣ್ಣಿಯಮ್ಮ ಪ್ರತಿ ಸರಿಯೂ ಅವಳ ಜಾತಿಯನ್ನು ಮುನ್ನೆಲೆಗೆ ತಂದು ಅದರ ಮೂಲಕವೇ ಅವಳನ್ನು ಹೀಯಾಳಿಸುವ ಪ್ರವೃತ್ತಿಯನ್ನು ಕಾಣಬಹುದು. ಅದು ಅವಳ ಹುಟ್ಟಿನಿಂದ ಇಡಿದು ಮದುವೆಯ ಸಂದರ್ಭದ ತನಕವೂ ಅಷ್ಟೆ. ರುಕ್ಕಮೂಲ್ಯನಿಗೆ ಚಂದು ಹುಟ್ಟಿದ ಸಂದರ್ಭದಲ್ಲಿ ನಾಮಕರಣದ ಕಾರ್ಯ ಮಾಡುವ ಪ್ರಸ್ತಾಪವನ್ನು ಕೆಮ್ಮಣು ತನ್ನ ಗಂಡನಿಗೆ ಹೇಳಿದಾಗ ಕಿಟ್ಟುಭಟ್ಟರ ಬಳಿ ಹೋಗಿ ಕಾಲ, ದಿನ, ಘಳಿಗೆ ಕೇಳಿ ಅದಕ್ಕೆ ಸರಿ ಹೊಂದುವ ಹಾಗೇ ಹೆಸರನ್ನು ಇಡಲು ಕೇಳಿಕೊಂಡು ಬರಲು ಕಳುಹಿಸಿದಾಗ, ಕಿಟ್ಟುಭಟ್ಟರ ಬಳಿ ರುಕ್ಕಯ್ಯ ಘಳಿಗೆ, ಕಾಲ ತಿಂಗಳನ್ನು ಕೇಳಿದಾಗ ಅದೆಲ್ಲ ನಿನಗೆ ಏಕೆ ಮಾರಾಯ ಎಂದು ಬೈದುದುಂಟು. ಅದಕ್ಕೆ ಪೂರಕ ಅಮ್ಮಣ್ಣಿಯಮ್ಮ ಇದೆಲ್ಲವನ್ನು ಕೇಳಿಸಿಕೊಂಡು "ನಿಮ್ಮ ಜಾತಿಗೆ ಯಾವಾಗ ತೊಟ್ಟಿಲ ಹಾಕಿದ್ರೂ ನಡೆಯುತ್ತೆ ಮಾರಾಯ ಮಧು–ಮಾಂಸ ತಿನ್ನುವ ಜಾತಿಗಳಿಗೆ, ದಿನ, ರಾಹುಕಾಲ, ಗುಳಿಗೆಕಾಲ, ಸಿಂಗೋಡೆ ಏನಾದ್ರೂ ಬೇಕಾ?"(ನಾಕನೇ ನೀರು, ಪು.ಸಂ. 64) ಎಂದು ಅಮ್ಮಣ್ಣಿಯಮ್ಮ ಮೂದಲಿಸಿದರ ಹಿಂದೆ ಮನುಷ್ಯರ ಆಚರಣೆ ಮೂಲಕ ಜಾತಿಯ ನಿರ್ಧಾರವಾಗಿದೆ ಎಂಬುದು ಸ್ಪಷ್ಟ. ಜಾತಿ ಕೇವಲ ವೃತ್ತಿಯಿಂದ ಮಾತ್ರವಲ್ಲ ಸಂಸ್ಕೃತಿ ಆಚರಣೆ, ಆಹಾರ ಬದುಕುವ ರೀತಿಯಿಂದಲ್ಲೂ ಮನುಷ್ಯರ ಜಾತಿಯನ್ನು ನಿರ್ಧಾರಿಸುವುದರ ಮಾನದಂಡವು ಆಗಿದೆ. ಕೆಲವು ಆಚರಣೆಗಳು ಕೆಲವು ಜಾತಿಗಳಿಗೆ ಇವತ್ತು ಸೀಮಿತವಾಗಿರುವುದನ್ನು ಕಾಣುತ್ತೇವೆ. ಅದರೆ ಇಲ್ಲಿ ಅಮ್ಮಣ್ಣಿಯಮ್ಮ ಶಾಸ್ತ್ರ ಸಂಪ್ರದಾಯಗಳು ಎಂಬುದು ತಳಸಮುದಾಯಗಳಿಗೆ ಅಲ್ಲ, ಅದು ಕೇವಲ ಮೇಲ್ವರ್ಗದವರು ಆಚರಿಸುವಂತದ್ದು. ಅದರಲ್ಲೂ ಮಧು ಮಾಂಸ ಸೇವಿಸುವ ಇವರು ಮನುಷ್ಯರಲ್ಲ ಎಂಬ ಅವರ ಭಾವದ ಜೊತೆ ತಳಸಮುದಾಯದ ಆಹಾರ ಪದ್ಧತಿಗಳನ್ನು ನಿಕೃಷ್ಟವಾಗಿ ಕಾಣುವುದು ಇಲ್ಲಿ ವ್ಯಕ್ತವಾಗಿದೆ. ಆಹಾರ ಪದ್ಧತಿಯಲ್ಲಿ ಶ್ರೇಷ್ಠ ಕನಿಷ್ಟ ಎಂಬ ಭಾವನೆ ಇನ್ನೂ ಸಮಾಜದಲ್ಲಿ ಇವತ್ತಿಗೂ ಇದೆ. ಅಷ್ಟೇ ಅಲ್ಲದೆ ತಳಸಮುದಾಯಗಳಿಗೆ ದಿನ, ಗಳಿಗೆ ರೀತಿ ನೀತಿ ಇಲ್ಲದೆ ಪಶುಗಳಂತೆ ಬದುಕುವವರು ಎಂಬುದು ಅಮ್ಮಣ್ಣಿಯಮ್ಮ ಮಾತಿನ ಅರ್ಥ. ಅಷ್ಟೇ ಅಲ್ಲದೆ ಮತ್ತೊಂದು ಕಡೆ ಪಂಚಾಂಗ ಕಾಲ, ದಿನ, ಶುಭ ಆಶುಭ ಎಂಬ ವಿಚಾರಗಳನ್ನು ತಳಸಮುದಾಯದವರ ತಲೆಯಲ್ಲಿ ತುಂಬಿ ಅದರಿಂದ ತಮ್ಮ ಬದುಕನ್ನು ಕಟ್ಟಿಕೊಂಡು, ಅದರ ಹಿನ್ನೆಲೆಯಲ್ಲಿ ಅವರ ಮೇಲೆ ಹಿಡಿತ ಸ್ಥಾಪಿಸಿರುವುದು ಹಾಗೂ ಸಮಾಜದಲ್ಲಿ ಎಲ್ಲಾ ಮುಖ್ಯ ವಲಯಗಳಲ್ಲಿ ಅವರ ಅಧಿಪತ್ಯವನ್ನು ನೋಡಬಹುದು.

ಜಾತಿ, ಆಹಾರ ಪದ್ಧತಿ, ವೃತ್ತಿ, ಸಂಸ್ಕ್ರತಿ ಆಚರಣೆ ಮೂಲಕ ನಿರ್ಧಾರವಾದರೆ. ಜಾತಿಯನ್ನು ಮನುಷ್ಯರಿಗೆ ಇಡುವ ಹೆಸರಿನಲ್ಲಿಯೂ ಜಾತಿ ರಾಜಕಾರಣ ಎದ್ದು ಕಾಣುತ್ತದೆ. ಅದಕ್ಕೆ ಸಾಕ್ಷಿಯಾಗಿ ಈ ಕಥೆಯಲ್ಲಿ ರುಕ್ಕಯ್ಯನ ಮಗುವಿಗೆ ಚಂದದ ಹೆಸರನ್ನು ಇಡಲು ಕಿಟ್ಟುಬಟ್ಟರ ಬಳಿ ಬಂದು ಮಗುವಿನ ಹುಟ್ಟಿನ ದಿನ ಗಳಿಗೆಗೆ ಹೊಂದುವಂತೆ ಹೆಸರನ್ನು ಸೂಚಿಸಲು ತಿಳಿಸಿದಾಗ ಕಿಟ್ಟುಭಟ್ಟರು ಅವಳು ಹುಟ್ಟಿದು ಸೋಮವಾರ ಆದರೆ ಚಂದ್ರಾವಳಿ ಎಂದು ಹೆಸ–ರಿಡು ಎಂದು ಸೂಚಿಸಿದಾಗ ಅದಕ್ಕೆ ಅಮ್ಮಣ್ಣಿಯಮ್ಮ "ನಿಮ್ಮ ಮಗಳ ಹೆಸರೂ ಚಂದ್ರಾವಳಿ. ಆ ಶೂದ್ರನ ಮಗುವಿಗೂ ಚಂದ್ರಾವಳೀ ಅಂತಾ ಹೆಸರಿಡುದಾ? ನಿಮಗೇನಾದ್ರೂ ತಲೆಯೊಳಗೆ ಹುಳವೆದ್ದಿದಾ ಹೇಗೆ? ನೋಡಾರುಕ್ಕ, ಮಗುವಿಗೆ ಚಂದು ಅಂತಾ ಹೆಸರಿಡು. ಅದೂ ಬೇಡವಾದ್ರೆ ಸೇಸಿಯಂತ ಇಡು ಎಂದು ರುಕ್ಕನಿಗೆ ಆಜ್ಞಾಪಿಸಿದ್ದರು" (ನಾಕನೇ ನೀರು, ಪು.ಸಂ. 65) ಇಲ್ಲಿ ಮುಖ್ಯವಾಗಿ ಹೆಸರಿಡುವ ವಿಚಾರದಲ್ಲಿ ಮೇಲ್ವರ್ಗದವರಿಗೆ ಬೇರೆ ತಳಸಮುದಾಯವರಿಗೆ ಬೇರೆ ಹೆಸರು, ಯಾವುದೇ ಕಾರಣಕ್ಕೂ ಮೇಲ್ವರ್ಗವರ ಹೆಸರನ್ನು ತಳಸಮುದಾಯದವರು ಇಟ್ಟುಕೊಳ್ಳುವಂತಿಲ್ಲ ಎಂಬ ಧೋರಣೆ ಅಮ್ಮಣ್ಣಿಯಮ್ಮನ ಮಾತಿನಲ್ಲಿ ವ್ಯಕ್ತವಾಗಿದೆ. ಅಷ್ಟೇ ಅಲ್ಲದೆ ತಳಸಮುದಾಯದವರಿಗೆ ಅಂತಲೇ ಕೆಲವು ಹೆಸರುಗಳು ಪೂರ್ವನಿರ್ಧರಿತವಾಗಿದೆ ಎಂಬಂತೆ ಸೇಸಿ, ಮಾದ, ಕರಿಯ, ಕೆಂಚ, ತಿಮ್ಮ, ಮಾರ ಎಂಬ ಹೆಸರಗಳನ್ನೇ ಇಡಬೇಕು. ಅದನ್ನು ಹೊರತು ಪಡಿಸಿ ಮೇಲ್ವರ್ಗದವರ ಹೆಸರುಗಳನ್ನು ಇಡುವಂತಿಲ್ಲ ಎಂಬುದರ ಹಿಂದೆ ಜಾತಿ ಎಷ್ಟರ ಮಟ್ಟಿಗೆ ಸಮಾಜದಲ್ಲಿ ಬೇರೂರಿದೆ ಎಂಬುದು ಅರ್ಥವಾಗುತ್ತದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ನೋಡುವುದಾದರೆ ಹೆಸರುಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇಂತಿಂತಾ ಹೆಸರುಗಳನ್ನು ಇಂತ ಸಮುದಾಯಗಳೇ ಇಟ್ಟುಕೊಳ್ಳಬೇಕು ಎಂಬ ಸಾಮಾಜಿಕ ನಿರ್ಬಂಧವೇನು ಇಲ್ಲ. ಆದರೆ ಅದರ ಸ್ವರೂಪ ಸ್ವಲ್ಪ ಬದಲಾಗಿ ತಮ್ಮ ಹೆಸರಗಳ ಮುಂದೆ ತಮ್ಮ ಜಾತಿಯ ಸೂಚಕ ಪದಗಳನ್ನು ಬಳಸುತ್ತಿರುವುದನ್ನು ನೋಡಿದರೆ ಇಲ್ಲಿ ಮುಖ್ಯವಾಗಿ ಎರಡು ಪ್ರಶ್ನೆಗಳಿವೆ ಒಂದು ಜಾತಿಯ ಮೂಲಕವೇ ನಮ್ಮ ಅಸ್ತಿತ್ವ ಎಂಬುದು ಒಂದು ಕಡೆ ಆದರೆ ಮತ್ತೊಂದು ಮೇಲ್ವರ್ಗದವರ ಜಾತಿ ಅಷ್ಟೇ ಶ್ರೇಷ್ಠವಲ್ಲ ನಮ್ಮ

ಜಾತಿಯು ಶ್ರೇಷ್ಠವೇ ಎಂಬ ಪ್ರತಿರೋಧವು ಆಗಿದೆ. ಈ ಎರಡು ದಾರಿಗಳಿಂದ ಶ್ರೇಷ್ಠತೆ ಮತ್ತು ಅಸ್ತಿತ್ವದ ಪ್ರಶ್ನೆಯಾದರೆ ಅದರ ಮೂಲ ಆಶಯ ಜಾತಿಯನ್ನು ಜೀವಂತವಾಗಿ ಉಳಿಸಿಕೊಳ್ಳುವುದೇ ಆಗಿದೆ ಎಂಬುದು ಸ್ಪಷ್ಟ.

ಚಂದುವನ್ನು ಪ್ರತಿ ಸಾರಿ ಬೈಯುವಾಗಲೂ ಅದನ್ನು ನೋಡುತ್ತಲೇ ಇದ್ದ ಕಿಟುಭಟ್ಟರು ಅಮ್ಮಣ್ಣಿಯಮ್ಮನಿಗೆ ಸಾಕಷ್ಟು ಎಚ್ಚರಿಕೆಯ ಮಾತುಗಳನ್ನು ಹೇಳಿದಾಗಿಯೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಜಾತಿಯ ಆಧಾರದ ಮೇಲೆ ಚಂದುವನ್ನು ನಿಂದಿಸುವುದು ದಿನನಿತ್ಯದ ಕಾರ್ಯವಾಗಿತ್ತು. ಅಮ್ಮಣ್ಣಿಯಮ್ಮನಿಗೆ ಒಂದು ಕಡೆ ಜಾತಿಯ ಪ್ರತಿಷ್ಠೆ ಇದ್ದರೆ, ಜಾತಿಯಿಂದ ತಳಸಮುದಾಯಗಳನ್ನು ಆಳುವ ಉದ್ದೇಶ ಮತ್ತೊಂದು ಕಡೆ, ಅವರನ್ನು ತಮ್ಮ ಅಧೀನದಲ್ಲೆ ಬದುಕಬೇಕು ಎಂಬ ಹುನ್ನಾರವು ಇದೆ. ಅವಳೆ ಹೇಳುವಾ ಹಾಗೆ “ಮೂಗುದಾರ ಹಿಡಿಯದೆ ಈ ಶೂದ್ರ ಮಕ್ಕಳನ್ನ ತಲೇಲಿಟು ಕೊಳ್ಳುತ್ತಾರೆ”(ನಾಕನೇ ನೀರು, ಪು.ಸಂ. 58)ಎಂದು ಅವನ ಗಂಡನ ಬಗೆಗೆ ಅವಳ ಅಸಮಾಧಾನವನ್ನು ವ್ಯಕ್ತ ಪಡಿಸುವುದರ ಮೂಲಕ ತಳಸಮುದಾಯದ ಜನರನ್ನು ಸಮಾಜದಲ್ಲಿ ಅವರಿಗೆ ಅವರದೆ ಆದ ಬದುಕು ಸ್ಥಾನಮಾನವು ಇಲ್ಲ, ಅವರನ್ನು ಪ್ರಾಣಿಗಳಂತೆ ಮೂಲೆಯಲ್ಲಿ ಉಳಿಸಬೇಕು. ಯಾವುದೆ ತರದ ಸಮಾಜದ ಸೌಲಭ್ಯವನ್ನ ಅವರು ಅನುಭವಿಸಬಾರದು ಎಂಬುದು ಅಮ್ಮಣ್ಣಿಯಮ್ಮನ ಈ ಮಾತಿನಲ್ಲಿ ವ್ಯಕ್ತವಾಗಿದೆ. “ಗಂಜೀ ಕುಡೀವವು ಗಗನಕ್ಕೆ ಹಾರುವುದಂದ್ರೇನು?” (ನಾಕನೇ ನೀರು, ಪು.ಸಂ. 58) ಈ ಮಾತಿನಲ್ಲಿ ತಳಸಮುದಾಯ ಜನರು ಯಾವುದೇ ಕಾರಣಕ್ಕೂ ಮೇಲ್ವರ್ಗದವರ ಹಾಗೆ ಬದುಕು ಕನಸ್ಸನ್ನು ಕಾಣುವಂತಿಲ್ಲ ಅಲ್ಲದೆ. ಅವರಂತೆ ಸುಂದರ ಬದುಕನ್ನು ಕಟ್ಟಿಕೊಳ್ಳುವ ಇವರ ಪ್ರಯತ್ನವನ್ನು ಮೇಲ್ವರ್ಗದವರು ಸದಾ ತುಳಿಯುವ ಹುನ್ನಾರವನ್ನು ಬೌದ್ಧಿಕವಾಗಿ ಮತ್ತು ದೈಹಿಕವಾಗಿ ಶತಮಾನಗಳಿಂದ ಮಾಡುತ್ತ ಬಂದಿದ್ದಾರೆ ಎಂಬುದನ್ನು ಧ್ವನಿಸುತ್ತದೆ.

ಮದುವೆ ವಿಷಯದಲ್ಲಿ ಜಾತಿಯ ಪ್ರಶ್ನೆಯೇ ಇಲ್ಲದೆ ಮುಂದುವರಿಯುವುದಿಲ್ಲ. ಅಂತಹದರಲ್ಲಿ ಪ್ರೀತಿಯ ವಿಷಯ ಬಂದಾಗ ಜಾತಿಯ ಮಾತು ದೂರ ಅದರೆ ಪ್ರೀತಿಯಲ್ಲಿ ದೂರವಾಗಲು ಜಾತಿಯೆ ಕಾರಣ ಎಂಬುದು ಶತಮಾನದಿಂದಲ್ಲೂ ಚರಿತ್ರೆ, ಸಾಹಿತ್ಯದಲ್ಲಿ ದಾಖಲಾಗಿವೆ. ಅದನ್ನು ಮೀರುವ ಕ್ರಮದಲ್ಲಿ ಶರಣರ ಪ್ರಯತ್ನ ಮೆಚ್ಚುವಂತದ್ದು. ಆದರೆ ಅದು ಎಷ್ಟರ ಮಟ್ಟಿಗೆ ಪ್ರತಿಫಲ ನೀಡಿದೆ ಎಂಬ ಪ್ರಶ್ನೆ ಅನೇಕರದು. ಆದರೆ ಜಾತಿಯನ್ನು ಮೀರಿ ಮದುವೆಯಾದರೆ ನಂತರದಲ್ಲಿ ಅವರು ಎದುರಿಸುವ ಸಮಸ್ಯೆಗಳ ಬಗ್ಗೆ, ಅವರ ಬದುಕು ಸಮಾಜದಲ್ಲಿ ಎಷ್ಟು ಸಮೃದ್ಧವಾಗಿತ್ತು ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನಗಳು ಕಾಣುವುದಿಲ್ಲ. ಆದರೆ ಜಾತಿಯನ್ನು ಮೀರಿ ಮದುವೆ ಆಗಿದ್ದೆ ಬಹುದೊಡ್ಡ ವಿಷಯವಾಗಿ ಚರ್ಚಿಸುವ ಅಗತ್ಯ ಇದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಹಾಗೇ ಇಲ್ಲಿ ಅಟ್ಟಿಗಾಲಿನ ಮಂಜಪ್ಪ ಮತ್ತು ಚಂದುವಿನ ಪ್ರೀತಿ ವಿಷಯದಲ್ಲಿ ಅವರು ಎದುರಿಸುವ ಸಾಮಾಜಿಕ ಸಮಸ್ಯೆಗಳನ್ನು ಮತ್ತು ತಳಸಮುದಾಯದ ಹೆಣ್ಣು ಮಕ್ಕಳನ್ನು ಯಾವ ಸ್ಥಾನಮಾನ ನೀಡಲಾಗಿದೆ ಎಂಬುದನ್ನು ಲೇಖಕಿ ಚಂದು ಮತ್ತು ಮಂಜಪ್ಪನ ಪ್ರೀತಿಯ ಬಗ್ಗೆ ಅಮ್ಮಣ್ಣಿಯಮ್ಮ ಈ ಮಾತಿನಲ್ಲಿ ಸ್ಪಷ್ಟವಾಗಿ ಕಾಣುತ್ತದೆ. “ಏನಾ ಮಂಜಪ್ಪ ನಿನ್ನ ಈ ಅಟ್ಟಗಾಲ ಜತೆ ಆ ಚಂದು ನಡೆದಾಡಿದ್ದೇ ಬಂತನಾ? ಅಲ್ವನಾ ಮಾರಾಯಾ... ನಿಮ್ಮ ಜಾತಿಯ ಶೆಟ್ರ ಹುಡುಗಿಯನ್ನು ಮದ್ವೆಯಾದ್ರೆ ನಿಂಗೆ ಒಳ್ಳೇ ಗಂಟೂ ಸಿಗುತ್ತೆ, ಜಾತಿಯ ಹುಡುಗಿಯೂ ಸಿಗುತ್ತೆ. ಆ ಮೂಲ್ಯರ ಹುಡುಗಿ ಚಂದುವನ್ನು ಬೇಕಿದ್ರೆ ಇಟ್ಟುಕೊಂಡ್ರೆ ಆಯ್ತು. ನಿಮ್ಮ ಜಾತಿಯಲ್ಲಿ ಎಲ್ಲರೂ ಹಾಗೆ ಮಾಡುದಲ್ಲನಾ? ನಿಂದೇನು ಹೆಚ್ಚು” (ನಾಕನೇ ನೀರು, ಪು.ಸಂ. 60) ಅಮ್ಮಣ್ಣಿಯಮ್ಮನ ಈ ಮಾತಿನಲ್ಲಿ ಮುಖ್ಯವಾಗಿ ತಳಸಮುದಾಯದ ಹೆಣ್ಣುಮಕ್ಕಳನ್ನು ಕೇವಲ ಭೋಗದ ವಸ್ತುವಿನಂತೆ, ಅವರಿಗೆ ಯಾವುದೇ ಅಸ್ತಿತ್ವವಿಲ್ಲದೆ ಅವರು ಮೇಲ್ವರ್ಗದ ಪುರುಷರ ಭೋಗದ ವಸ್ತುಗಳು ಎಂಬ ಅರ್ಥದಲ್ಲಿ ನಿರೂಪಿಸಿರುವುದನ್ನು ಯೂ. ಆರ್. ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯಲ್ಲಿ ಬರುವ ಚಂದ್ರಿಕಾ ಪಾತ್ರ, ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯ ಬೆಳ್ಳಿ ಪಾತ್ರಗಳ ಹಿನ್ನೆಲೆಯಲ್ಲಿ ಕಾಣಬಹುದು.

ಆದರೆ ಹೆಚ್. ನಾಗವೇಣಿ ಅವರು ಈ ಕಥೆಯಲ್ಲಿ ಅದನ್ನು ವಿರೋಧಿಸುವ ಹಿನ್ನಲೆಯಲ್ಲಿ ಪ್ರೀತಿಯನ್ನು ಮುನ್ನಲೆಯಲ್ಲಿ ತಂದು ಜಾತಿಯನ್ನು ವಿರೋಧಿಸುವ ಮತ್ತು ತಳಸಮುದಾಯದ ಹೆಣ್ಣು ಮಕ್ಕಳು ಕೇವಲ ಭೋಗದ ವಸ್ತುವಲ್ಲ ಅವರಿಗೂ ಸಮಾಜದಲ್ಲಿ ಗೌರವ ಸ್ಥಾನಮಾನ ಇದೆ ಎಂಬುದನ್ನು ಮಂಜಪ್ಪನ ಈ ಮಾತುಗಳಿಂದ ನಿರೂಪಿಸುವ ಪ್ರಯತ್ನ ಎದ್ದು ಕಾಣುತ್ತದೆ. ಅಮ್ಮಣ್ಣಿಯಮ್ಮ ಜಾತಿಯಿಂದ ಆಸ್ತಿ ಸಾಮಾಜಿಕ ಸ್ಥಾನಮಾನದಲ್ಲಿ ಎತ್ತರದಲ್ಲಿ ಇದ್ದರೂ ಅದನ್ನು ಕಡೆಗಣಿಸಿ ಮಂಜಪ್ಪ ತನ್ನ ಪ್ರೀತಿಯ ಚಂದುವನ್ನು ಅಮ್ಮಣ್ಣಿಯಮ್ಮನಿಗಿಂತ ಎತ್ತರದ ಸ್ಥಾನದಲ್ಲಿ ಇಟ್ಟು ಮಾತನಾಡುವುದನ್ನು ನೋಡಿದರೆ ಮಂಜಪ್ಪನ ಪ್ರೀತಿ ತಳಸಮುದಾಯದ ಹೆಣ್ಣಿನ ಮೇಲೆ ಇದುವರೆಗೆ ನಿರೂಪಿಸಲ್ಪಟ್ಟ ಮಾದರಿಯನ್ನು ಹೊಡೆದು ಹಾಕಿದ ಹೊಸ ಮಾದರಿಯನ್ನು ಇಲ್ಲಿ ಲೇಖಕಿ ಮೇಲ್ವರ್ಗದ ಮಂಜಪ್ಪನ ಮೂಲಕವೇ ಕಟ್ಟುಕೊಟ್ಟಿದ್ದಾರೆ. “ಬದುಕಿನ ಯಾವ ಹಂತದಲ್ಲೂ ಕಿಟ್ಟು ಭಟ್ಟರಿಗೆ ಅಮ್ಮಣಿಯಮ್ಮನಿಂದ ಇಂತಹ ಪ್ರೀತಿ ಸಿಕ್ಕಿಯೇ ಇಲ್ಲ. ಅದಕ್ಕೆ ಹೆತ್ತೂ ಗೊತ್ತಿಲ್ಲ– ಮೂಸಿಯೂ ಗೊತ್ತಿಲ್ಲ. ಅದಕ್ಕೆ.. ಆ ಬ್ರಾಹ್ಮಣ್ತಿ ಆ ರೀತಿ ಕರುಬುತ್ತೆ, ಹಲಬುತ್ತೆ; ಒಂದು ದಿನ ಹೀಗೇ ಗೋಳಾಡಿ ಆ ಮಡಿಕೆರೆಗೆ ಬಿದ್ದು ಸಾಯುತ್ತೆ?”(ನಾಕನೇ ನೀರು, ಪು.ಸಂ. 61)ಎಂದು ಮಂಜಪ್ಪತನ್ನ ಮತ್ತು ಚಂದುವಿನ ಪ್ರೀತಿಯ ಬಗ್ಗೆ ಕೇವಲವಾಗಿ ಮಾತನಾಡಿದ ಅಮ್ಮಣ್ಣಿಯಮ್ಮನಿಗೆ ಪ್ರೀತಿ ಅರ್ಥವನ್ನು ತಿಳಿಸುವ ಮತ್ತು ಪ್ರೀತಿಯನ್ನು ಕೊಟ್ಟು ಬದುಕಲು ಬಾರದ ಸದಾ ಜಾತಿ ಸಂಪ್ರದಾಯ ಮಡಿ ಎಂದು ಬದುಕುವವ–ರಿಗೆ ಇದೆಲ್ಲ ತಿಳಿಯದ ವಿಷಯ ಎಂದು ಮಂಜಪ್ಪ ಮಾತಿನಲ್ಲಿ ವ್ಯಕ್ತವಾಗಿದೆ. ಅಷ್ಟೇ ಅಲ್ಲದೆ ಮಂಜಪ್ಪನ ಮೂಲಕ ತಳಸಮುದಾಯದವರ ಪ್ರೀತಿಯನ್ನೇ ಮೌಲ್ಯವಾಗಿಸಿಕೊಂಡು ಬದುಕುವ ಜನರ ಪ್ರೀತಿಗೆ ಅವರು ಕೊಡುವ ಮಹತ್ವವನ್ನು ಈ ಮಾತಿನ ಮೂಲಕ ತಿಳಿಸುತ್ತ ಜಾತಿಗಿಂತ ಪ್ರೀತಿಯೇ ದೊಡ್ಡದು ಎಂದು ಸಾರುವ ಪ್ರಯತ್ನವನ್ನು ಲೇಖಕಿ ಇಲ್ಲಿ ಮಾಡಿದ್ದಾರೆ.

ಚಂದು ಮತ್ತು ಮಂಜಪ್ಪ ಪ್ರೀತಿ ನಿನ್ನೆ ಮೊನ್ನೆಯದಲ್ಲ, ಅದು ಅವರ ತಾಯಿ ಕೆಮ್ಮಣ್ಣು ತೀರಿ ಹೋದ ದಿನದಿಂದ ಹುಟ್ಟಿದ್ದು. ಆಗ ಚಂದುವಿಗೆ ಹದಿನಾರು ವರ್ಷ ಮಂಜಪ್ಪನಿಗೆ ಇಪ್ಪತ್ತೊಂದು ವರ್ಷ ಆಗಿಂದಲೂ ಮಂಜಪ್ಪ ಮತ್ತು ಚಂದುವಿನ ಪ್ರೀತಿಯ ಬಗ್ಗೆ ಸ್ವತಃ ಅವರ ಕೇರಿ ಜನರೇ ಅಷ್ಟೊಂದು ಗಂಭೀರವಾಗಿ ಪರಿಗಣಿಸಿರಲ್ಲಿಲ. ಅದೇ ರೀತಿ ಮಂಜಪ್ಪನ ತಾಯಿಯೂ ಕೂಡ ಇವರ ಪ್ರೀತಿಯ ಬಗ್ಗೆ ತಾತ್ಸಾರ ಮನೋಭಾವದೊಂದಿಗೆ ಬೊಂಙಕ್ಕೆಯು ತನ್ನ ಮಗನ ಬಗ್ಗೆ “ಒಳ್ಳೇ ದುಡ್ಡುಕೊಡುವ ಸಂಬಂಧ ಬಂದರೆ ತನ್ನ ಮಂಜಪ್ಪ ಜಾತಿ ಹುಡುಗಿಯನ್ನು ಮದುವೆಯಾಗದೆ ಎಲ್ಲಿ ಹೋಗುತ್ತಾನೆ?” (ನಾಕನೇ ನೀರು, ಪು.ಸಂ. 62)ಎಂಬ ನಂಬಿಕೆಯಿಂದ ಸುಮ್ಮನೆ ತಲೆಕೆಡಿಸಿಕೊಳ್ಳದೆ ಇದ್ದದ್ದು, ಅವರ ಪ್ರೀತಿ ಬಲವಾಗಿ ನಿಲ್ಲಲೂ ಸಹಾಯವಾಗಿತ್ತು. ಆದರೆ ಮಂಜಪ್ಪ ಮತ್ತು ಚಂದುವಿನ ಪ್ರೀತಿಯ ಬಗ್ಗೆ ಪ್ರಸ್ತಾಪಿಸಿದ ಲೇಖಕರು ಎಲ್ಲೂ ಕೂಡ ಮಂಜಪ್ಪನ ಮೂಲಕ ಮದುವೆಯ ವಿಷಯದ ಪ್ರಸ್ತಾಪವೇ ಇಲ್ಲದಿರುವುದನ್ನು ಗಮನಿಸಿದ್ದಾರೆ ಎಲ್ಲೋ ಒಂದು ಕಡೆ ಈ ಸಮಾಜದ ಕಟ್ಟುಪಾಡುಗಳನ್ನು ಮೀರುವ ಪ್ರಯತ್ನವಿದ್ದರೂ ಮೀರಾಲಾಗದ ಅಸಹಾಯಕತೆಯನ್ನು ಎತ್ತಿಹಿಡಿದಿದೆ. ಪ್ರೀತಿಸಲು ಯಾವುದೇ ಜಾತಿ ಅಡ್ಡಿ ಬರುವುದಿಲ್ಲ. ಆದರೆ ಅದೇ ಪ್ರೀತಿ ಮದುವೆ ಎಂಬ ಸಾಮಾಜಿಕ ಸಂಸ್ಥೆಗೆ ಒಳಪಡುವ ಹೊತ್ತಿಗೆ ಜಾತಿ ಮುಖ್ಯವಾಗುವುದನ್ನು ನೋಡಿದಾಗ ಸಮಾಜದಲ್ಲಿ ಜಾತಿಯನ್ನು ಮೀರಿ ಬೆಳೆಯುತ್ತಿದ್ದೇವೆ ಎಂಬುವ ಹೊತ್ತಿನಲ್ಲಿಯೂ ನಮ್ಮ ಪರಂಪರೆ, ಸಂಪ್ರದಾಯ ನಮಗೆ ಗೊತ್ತಿಲ್ಲದೆ ನಮ್ಮನ್ನು ನಿಯಂತ್ರಿಸುತ್ತಿರುತ್ತವೆ ಎಂಬುದು ಸತ್ಯ. ಒಟ್ಟಾರೆಯಾಗಿ ಈ ಕಥೆಯಲ್ಲಿ ಜಾತಿಯನ್ನು ಮೀರುವ ಶಕ್ತಿ ಪ್ರೀತಿಗೆ ಮಾತ್ರ ಸಾಧ್ಯ ಎಂಬುದನ್ನು ವ್ಯಕ್ತವಾಗಿದೆ. ಅಲ್ಲದೆ ಅದನ್ನು ಮೀರುವಲ್ಲಿ ಇರುವ ಕೆಲವು ಮಿತಿಗಳನ್ನು ಗುರುತಿಸಲಾಗಿದೆ. ಅಲ್ಲದೆ ಸಮಕಾಲೀನ ಸಂದರ್ಭದಲ್ಲಿ ಅವಸರದಲ್ಲಿ ಕೆಲವು ಸಾರಿ ಮುಂದಿನ ಪರಿಣಾಮಗಳ ಬಗ್ಗೆಯೂ ಯೋಚಿಸದೆ ತೆಗೆದುಕೊಂಡ ನಿರ್ಧಾರಗಳಿಗೆ ತಳಸಮುದಾಯಗಳು ಕಟ್ಟಿದ ಬೆಲೆ ಆಗಾಧವಾದ್ದದು ಎಂಬುದನ್ನು ಮರೆಯುವಂತಿಲ್ಲ.

**ಆಕರಗ್ರಂಥ:**

1. ಎಚ್. ನಾಗವೇಣಿ, ನಾಕನೇ ನೀರು, 2019, ಪಲ್ಲವ ಪ್ರಕಾಶನ, ಚನ್ನಪಟ್ಟಣ.

**ಪರಾಮರ್ಶನ ಗ್ರಂಥಗಳು:**

1. ಸಂ. ರಾಮಚಂದ್ರಶರ್ಮ, ಸಮಕಾಲೀನ ಕನ್ನಡ ಸಣ್ಣಕತೆಗಳು, 1999, ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯನ್‌ಗ್ರೀನ್ ಪರ್ಕ್, ನವ ದೆಹಲಿ.
2. ಡಾ. ಟಿ. ಆರ್. ಚಂದ್ರಶೇಖರ್, ಮಹಿಳಾ ಅಧ್ಯಯನ ಪರಿಭಾಷೆ, 2016, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಬೆಂಗಳೂರು.
3. ಚಂದ್ರಶೇಖರ ಪಾಟೀಲ, ಕೃತಿಕೇಂದ್ರಿತ ವಿಮರ್ಶಾ ಬರಹಗಳ ಸಂಕಲನ, 2017, ಸಪ್ನ ಬುಕ್ ಹೌಸ್, ಬೆಂಗಳೂರು.
4. ಡಾ. ಬಿ. ಎನ್. ಸುಮಿತ್ರಾ ಬಾಯಿ, ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, 2010, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.